
# ರೈನರ್ ಮರಿಯಾ ರಿಲ್ಕ ಕವಿತೆಗಳು

**ಕನ್ನಡಕ್ಕೆ: ಎಚ್.ಎಸ್. ರಾಘವೇಂದ್ರ ರಾವ್**





## ಮಾಗಿಯ ದಿನ

ಒಡೆಯ: ಈಗ ಬಂದಿದೆ ಸಮಯ. ಕಳೆದಿದೆ ಕೊನೆಯಿರದ ಬೇಸಿಗೆ
ಕವಿಚಿಕೊಳ್ಳಲಿ ನಿನ್ನ ನೆರಳು ಗಡಿಯಾರಗಳ ಮೇಲೆ ಹೀಗೆ ಹೀ...ಗೆ.
ಬೀಸಲಿ ಗಾಳಿ, ಹುಲ್ಲುಗಾವಲ ಮೇಲೆ ಯಾವುದೇ ಅಡ್ಡಿಯಿರದೆ

ಮರಬಳ್ಳಿಗಳ ಮೇಲೆ ಮಾಗಿರುವ ಹಣ್ಣುಗಳು ರಸತುಂಬಿಕೊಳಲೆಂದು ಆಣತಿ ಕೊಡು
ಇನ್ನೆರಡು ದಿನ ಅವಕೆ ಬೆಚ್ಚನೆಯ ಬಿಸಿಲನ್ನು ಮುತ್ತಿಡುವ ಗಾಳಿಯನು ದಯಪಾಲಿಸು
ಬಳಿಕ ಚಲಿಸಲಿ ಹಣ್ಣು ಪರಿಪೂರ್ಣತೆಯ ಕಡೆಗೆ ಕಡುಸಿಹಿಯು ತುಂಬಿಬರಲಿ
ಹುಳಿಕಳೆದ ದ್ರಾಕ್ಷಿಗಳು ನಿನ್ನ ಕರುಣೆಯ ಹೊನಲು 'ಅವು ತುಟಿಗೆ ಈಗಲೇ ಬಂದುಬಿಡಲಿ'.

ಮನೆಯಿಲ್ಲವೆ ಈಗವನಿಗೆ ಸಿಗದು ಸೂರು ಜಂತಿಯು
ಒಂಟಿತನವೆ, ಜೊತೆಯಿಲ್ಲವೆ ನಿಟ್ಟುಸಿರೇ ಗೆಳತಿಯು.
ಕುಳಿತು ಸುಮ್ಮನೆ ಓದಿ ಸುಮ್ಮನೆ ಇಷ್ಟುದ್ದ ಪತ್ರಗಳ ಬರೆಬರೆದು ಸುಮ್ಮನೆ
ಹಾದಿಬೀದಿಗಳಲ್ಲಿ ಅಲೆದಲೆದು ಸುಮ್ಮನೆ ಕಳೆಯುವುದು ಅವನ ಕಾಲ.
ಹಾರುತ್ತಿವೆ ತರಗೆಲೆಗಳು, ಇದುವೇ ಚಳಿಗಾಲ.

'Autumn Day', Book of Images, 1902, Paris.